ನೀಡಿದ ಉತ್ತರ ಕರುಣಾಜನಕವಾಗಿತ್ತು. ‘‘ನಮ್ಮ ಕಾಲೇಜಲ್ಲಿ ಹುಡುಗೀರೇ ಇರಲಿಲ್ಲ ಸಾರ್. ನಮ್ಮ ಕಾಲೇಜಿಗೆ ಬರಲಿಕ್ಕೆ ಹುಡುಗೀರು ಭಯ ಬೀಳೋರು. ಇಡೀ ಕಾಲೇಜಿಗೆ ಅಮ್ಮಮ್ಮಾ ಅಂದ್ರೆ ಏಳೆಂಟು ಹುಡುಗೀರಿದ್ದರು ಅಷ್ಟೆ. ಆಮೇಲೆ, ನಾನಾಗ ಹುಡುಗೀರ ಹಿಂದೆ ಬಿದ್ದಿದ್ರೆ ಯಾರೂ ನನ್ನನ್ನ ತಿರುಗಿನೋಡ್ತಿರಲಿಲ್ಲ. ಅಷ್ಟು ಕೆಟ್ಟದಾಗಿದ್ದೆ ನಾನಾಗ. ಈಗ ಹಳೆ ಫೋಟೊ ನೋಡಿದ್ರೆ ನನ್ನ ಬಗ್ಗೆ ನನಗೇ ಅಯ್ಯಯ್ಯೋ ಅನ್ನುತ್ತೆ’’ ಎಂದರು.

ಅಂದ ಹಾಗೆ, ಚಿಕ್ಕಣ್ಣ ಸದ್ಯಕ್ಕೆ ಬೆಂಗಳೂರಿನಲ್ಲೇ ಒಬ್ಬರೇ ಇದ್ದಾರೆ. ‘ಫೋರ್ಸ್ಡ್ ಅಂಡ್ ಮೋಸ್ಟ್ ಎಲಿಜಬಲ್ ಬ್ರಹ್ಮಚಾರಿ’ ಎನ್ನುವ ವಿಶೇಷಣವನ್ನು ನಗುನಗುತ್ತಲೇ ಸ್ವೀಕರಿಸಿದರು. ‘ಸದ್ಯಕ್ಕೆ ಮದುವೆ ಯೋಚನೆ ಇಲ್ಲ. ನನ್ನ ಕೆಲಸದಲ್ಲಿ ಖುಷಿ ಇದೆ’ ಎಂದರು.

‘ಈಗ ಸಿನಿಮಾದಲ್ಲಿ ಕ್ಲಿಕ್ಕಾದ ಮೇಲೆ ಹೆಣ್ಣುಮಕ್ಕಳು ಯಾರೂ ಮೆಚ್ಚಿ ಪ್ರಪೋಸ್ ಮಾಡಿಲ್ಲವಾ?’

‘‘ಎಲ್ಲಿ ಬರಬೇಕು? ಶೂಟಿಂಗ್ ಬಿಟ್ರೆ ಆಚೆ ಗೀಚೆ ಹೋಗುವ ಅಭ್ಯಾಸ ಇಲ್ಲ. ರಜೆ ಇದ್ರೆ ಊರಿಗೆ ಹೋಗಿ ಆರಾಮಾಗಿ ಮಲಗೋದೆ. ಈಚೆಗೆ ಸ್ವಲ್ಪ ತೋಟ ತಗೊಂಡಿದ್ದೇನೆ. ವ್ಯವಸಾಯ ನಂಗಿಷ್ಟ. ವ್ಯವಸಾಯ ಮಾಡಲೂ ಬರುತ್ತೆ. ಹೊಲ ಉಳೋಕೆ, ಉಕ್ಕೆ ಹೊಡೆಯೋಕೆ ಎಲ್ಲ ಬರುತ್ತೆ’’ ಎಂದು ನಿರುಮ್ಮಳವಾಗಿ ನಕ್ಕರು.



ಚಿಕ್ಕಣ್ಣನವರನ್ನು ಬೀಳ್ಕೊಂಡು ಹೊರಡುವ ಸಂದರ್ಭದಲ್ಲಿ ನಡುಮನೆಯ ಮೂಲೆಯಲ್ಲಿದ್ದ ಗಿಟಾರ್ ಗಮನ ಸೆಳೆಯಿತು. ನಮ್ಮ ಕಣ್ಣಲ್ಲಿನ ಪ್ರಶ್ನೆ ಗಮನಿಸಿದವರಂತೆ, ‘‘ನಂಗೆ ಮ್ಯೂಸಿಕ್‌ನಲ್ಲಿ ತುಂಬಾನೇ ಇಂಟರೆಸ್ಟ್. ಗಿಟಾರ್ ಕಲಿಯೋಣ ಅಂತ ಒಬ್ಬರನ್ನು ಮನೆಗೆ ಕರೆಸಿದೆ. ಅವರು ಎಬಿಸಿಡಿ ಅಂತೆಲ್ಲ ಏನೇನೋ ಬರೆಸಿ ಹೆದರಿಸಿಬಿಟ್ರು. ಒಂದೇ ದಿನಕ್ಕೆ ಪಾಠ ನಿಂತ್ಹೋಯ್ತು’’ ಎಂದು ಹೇಳುತ್ತಲೇ ಗಿಟಾರ್ ತೆಗೆದುಕೊಂಡು ಕುಂಯ್‌ಗುಟ್ಟಿಸಿದರು.

ಬಾಗಿಲಿನಿಂದ ಹೊರಬಂದ ಮೇಲೆ ಕೇಳಿದ್ದು, ಬೆಲ್ ಬಗ್ಗೆ.

‘‘ಅಯ್ಯೋ ಹುಡುಗ್ರು ತುಂಬಾ ತೊಂದ್ರೆ ಕೊಡ್ತಿದ್ರು ಸಾರ್.. ಹಂಗಾಗಿ ಬೆಲ್ಲೇ ತೆಗೆಸಿಬಿಟ್ಟೆ’’ ಎಂದಾಗ, ನಗುವ ಸರದಿ ನಮ್ಮದಾಗಿತ್ತು.

‘ಬೆಲ್ ಇದ್ದರೆ ಒಳ್ಳೆಯದು. ಯಾವ ಚೆಲುವೆ ಯಾವಾಗ ಬಂದು ಬೆಲ್ ಒತ್ತುವಳೋ ಏನೋ... ಅವಕಾಶ ತಪ್ಪಿಸಿಕೊಳ್ಳಬೇಡಿ’ ಎಂದು ಕಿಚಾಯಿಸಬೇಕೆನಿಸಿದ ಮಾತು ಮನಸಿನಲ್ಲಿಯೇ ಉಳಿಯಿತು.



ಈಶ್ವರ ಬಡಿಗೇರ

# ಪಕೋಡಾ ಪಾಲಿಟಿಕ್ಸ್!

★ ತುರುವೇಕೆರೆ ಪ್ರಸಾದ್

ಪಕೋಡ ಮಾರುವುದೂ ಒಂದು ಉದ್ಯೋಗ ಎಂದು ಮೋದಿ ಸಾಹೇಬರು ಹೇಳಿದ್ದನ್ನು ಜನರು ಮರೆಯಲು ತಯಾರೇ ಇಲ್ಲ. ಅಲ್ಲಲ್ಲಿ ಪಕೋಡ ಮಾರುವವರ ಸಂಖ್ಯೆಯೂ ಹೆಚ್ಚಾಗಿದೆ. ಈಗ ಪಕೋಡ ಮಾರುವವರಿಗೆ ಒಂದು ‘ಸ್ಪೆಶಲ್ ಪಕೋಡ ಡ್ರೈವ್’ಗೆ ಪಕೋಡ ಸಚಿವಾಲಯ ಸದ್ಯದಲ್ಲೇ ಚಾಲನೆ ಕೊಡಲಿದ್ದು ಗೆಜೆಟ್ ನೋಟಿಫಿಕೇಶನ್ ಹೊರಬೀಳಲಿದೆ ಎಂಬ ಖಚಿತ ಮಾಹಿತಿ ಹೊರಬಿದ್ದಿದೆ.

ಈ ಹಿನ್ನೆಲೆಯಲ್ಲಿ ಪಕೋಡೋದ್ಯೋಗ ಯೋಜನೆಯಡಿ ಉದ್ಯೋಗ, ಅನುದಾನ, ಸಾಲ ಇತರೆ ಸವಲತ್ತುಗಳನ್ನು ಪಡೆಯಲು ತುದಿಗಾಲಲ್ಲಿ ನಿಂತಿರುವ ನಿರುದ್ಯೋಗಿಗಳಿಗೆ ಒಂದು ಸಿಇಟಿ ಪರೀಕ್ಷೆ ಕೂಡಾ ನಡೆಯಲಿದೆ. ಪಕೋಡಾ ಕೋಟಾದಡಿ ಉದ್ಯೋಗ ಗಿಟ್ಟಿಸುವವರಿಗಾಗಿ ಇಲ್ಲಿದೆ ಒಂದು ಮಾದರಿ ಪ್ರಶ್ನೆ ಪತ್ರಿಕೆ.

(ವಿ.ಸೂ: ಪಕೋಡ ಹಾಕುವವರು, ತಿನ್ನುವವರು ಎಲ್ಲರೂ ಟ್ರೈ ಮಾಡಬಹುದು. ಲಿಖಿತ ಪರೀಕ್ಷೆಯಲ್ಲಿ ಪಾಸಾದವರು ಸ್ವಂತ ಖರ್ಚಿನಲ್ಲಿ ಸ್ಟವ್, ಬಾಣಲೆ, ಎಣ್ಣೆ, ಪಕೋಡ ಮಿಕ್ಸ್ ತಂದು ಉಚಿತ ಪ್ರಾತ್ಯಕ್ಷಿಕೆ ನೀಡಲು ಸಿದ್ಧರಿರಬೇಕು. ಅರ್ಜಿಯ ಮೇಲ್ಭಾಗದಲ್ಲಿ ನಿಮ್ಮ ಇತ್ತೀಚಿನ ಪಕೋಡ ಮಾಡುತ್ತಿರುವ ಎಣ್ಣೆ(ತೈಲ)ಚಿತ್ರ ಲಗತ್ತಿಸಿ.)

57ನೇ ಪುಟಕ್ಕೆ...